(SRI K. V. SHANKARA GOWDA)

19 The Assistant Engineer,
Traffic (P and T),
Bangalore.

20 Director,
Publicity and Information,
Multi Storeyed Buildings,
Bangalore.

21 Vishala Maharashtra,
S. M. Road,
Belgaum.

Absence of Transport Facilities in Kolar District after Nationalisation of Bus Routes

961. **Sri B. VENKATARAYAPPA** (Sidlaghatta).—

Will the Minister for Transport be pleased to state :—

(*a*) whether Government is aware of the inconvenience caused to the public on account of absence of transport facilities in Kolar Districts due to nationalisation of Bus Routes ;

(*b*) the number of buses operating on the nationalised bus routes in Kolar District and the number of private buses that were operating on those routes ?

Sri MOHAMED ALI (Minister for Transport).—

(*a*) No.

(*b*) 176 vehicles of Mysore State Road Transport Corporation are operating 306 trips in the sector. Private operators were operating 212 vehicles making 212 trips.

Admission to the Visitors Gallery in L.A. Hall

†ಶ್ರೀ ಹೆಚ್. ಎನ್. ನಂಜೇಗೌಡ (ಅರಕಲಗೂಡು).—ಸ್ವಾಮಿ, 312 ನೇ ರೂಲ್ಸ್ ಪ್ರಕಾರ ನಾನು ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೇನೆ. ಅಲ್ಲದೆ ಪಾಸುಗಳನ್ನು ವಿಜಿಟರ್ಸ್‌ಗೆ ಯಾರೂ ಕೊಡಕೂಡದು ಎಂದು ತಾವು ಆರ್ಡರ್ ಮಾಡಿದ್ದೀರಿ ಎಂದು ಇಲ್ಲಿರುವ ಪೋಲೀಸರು ಭಯ ಉತ್ಪತ್ತಿ ಮಾಡುತ್ತಿದ್ದಾರೆ. ಅಲ್ಲದೆ ತಾವು ಪಾಸು ಕೊಡುವ ಬಗ್ಗೆ ಏನೋ ಒಂದು ರೀತಿಯ ಕ್ರಮ ಕೈಗೊಂಡಿದ್ದೀರಿ. ಇದರಲ್ಲಿ ನಮಗೆ ತೊಂದರೆಯಾಗಿರುವುದನ್ನು ಇಲ್ಲಿ ಹೇಳುತ್ತಿದ್ದೇವೆ. 319 ರ ಪ್ರಕಾರ ವಿಜಿಟರ್ಸ್‌ಗಳನ್ನು ಹೇಗೆ ಬಿಡಬೇಕು ಎನ್ನುವ ಹಕ್ಕು ತಮಗಿದೆ ಮತ್ತು 320 ರ ಪ್ರಕಾರ ಯಾರನ್ನು ಹೊರಕ್ಕೆ ಕಳುಹಿಸಬೇಕು ಎನ್ನುವ ಹಕ್ಕೂ ಕೂಡ ತಮಗೆ ಇದೆ. ಇದರಂತೆ ಇಲ್ಲಿ ಪೋಲೀಸಿನವರೂ ಬಂದಿದ್ದಾರೆ. ವಾಚ್ ಅಂಡ್ ವಾರ್ಡಿನವರು ತಮಗೆ ಬಂದು ದೂರು ಕೊಟ್ಟಿದ್ದಾರೆ ಎನ್ನುವ ಮಾತನ್ನು ಇಲ್ಲಿ ಹೇಳಿದಿರಿ. 320 ರ ರೂಲು ಪ್ರಕಾರ ಇದಕ್ಕೆ ಕೆಲವು ಅವಕಾಶಗಳನ್ನು ಮಾಡಿಕೊಳ್ಳಬಹುದು. ತಾವು ನೋಟೀಸು ಆಫೀಸು ಮೂಲಕ ಪಾಸುಗಳನ್ನು ಕೊಡಿಸುತ್ತೇವೆ ಎಂದು ಹೇಳಿದಿರಿ. ಆದರೆ ಇಂದು ನೋಟೀಸು ಆಫೀಸಿನಲ್ಲಿ ಪಾಸು ಕೊಡುವ ಭಾಗಿಲು

ಪೂರ್ತಿಯಾಗಿ ಮುಚ್ಚಿದೆ. ಇದನ್ನು ನಾನು ಕೂಡ ಈಗ ಹೊರಗೆ ಹೋಗಿ ನೋಡಿಕೊಂಡು ಬಂದೆ. ಆದರೆ ತಮ್ಮ ಅಪ್ಪಣೆಯಿಂತೆ ಬಾಗಿಲನ್ನು ಈಚೆಗೆ ತೆರೆದಿದ್ದಾರೆ. ಅಲ್ಲಿ ಪೋಲೀಸು ಪಹರೆ ಹೆಚ್ಚಾಗಿದೆ. ಆದರೆ ಪಾಸುಗಳನ್ನು ಬೇಡಿ ಬಂದವರು ಹೊರಟು ಹೋಗಿದ್ದರು ಮತ್ತು ಪೋರ್ಟಿಕೋದಿಂದ ಹೊರಕ್ಕೂ ಪೋಲೀಸಿನವರು ಕಳುಹಿಸಿದ್ದಾರೆಂದು ಕೇಳುತ್ತೇನೆ. ಇದರ ಬಗ್ಗೆ ಏತಕ್ಕಾಗಿ ಇಷ್ಟು ಜನ ಪೋಲೀಸಿನವರನ್ನು ಇಟ್ಟಿದ್ದಾರೋ ನಮಗೆ ಅರ್ಥವಾಗುತ್ತಿಲ್ಲ. ಇಲ್ಲಿರುವ ಮಹಾದ್ವಾರ ಯಾರ ಆಡಳಿತಕ್ಕೆ ಒಳಪಟ್ಟದ್ದು ನಿಯಮಾನುಸಾರ ಗೊತ್ತಾಗುತ್ತಿಲ್ಲ. ಸರಕಾರಕ್ಕೆ ಸೇರಿದುದು ಸ್ಪೀಕರ್‌ಗೆ ಅಲ್ಲ ಎನ್ನುವುದಾಗಿದ್ದರೆ ಅದು ಬೇರೆ ವಿಚಾರ. ಇದರ ಬಗ್ಗೆ ಹಕ್ಕುಬಾಧ್ಯತಾ ಪ್ರಶ್ನೆ ಬರುತ್ತದೆ. ಆದರೆ ಮಹಾದ್ವಾರವೂ ತಮ್ಮ ಅಧಿಕಾರಕ್ಕೆ ಒಳಪಟ್ಟಿದೆ ಎಂದು ಕೇಳುತ್ತೇವೆ. ಇದರ ಬಗ್ಗೆ ಸರಿಯಾದ ವಿವರಣೆ ಕೇಳಿ ತಿಳಿಯಬೇಕಾಗಿದೆ. ಈ ಪ್ರಶ್ನೆ ಇಲ್ಲಿ ಉತ್ಪನ್ನವಾಗುವುದಕ್ಕೆ ಕಾರಣವೇನು ಎಂದರೆ ಇಂದು ರ್ಯಾಂಡು ರೆವೆನ್ಯೂ ಡಿಮ್ಯಾಂಡು ಇಲ್ಲಿ ಚರ್ಚೆಯಾಗಬೇಕಾಗಿದೆ, ಇದರ ಚರ್ಚೆಯನ್ನು ನೋಡಲು ನೂರಾರು ಜನ ರೈತರು ಹೊರಗಡೆಯಿಂದ ಬಂದಿರುವವರನ್ನು ಇಲ್ಲಿಗೆ ಬರಲು ಅವಕಾಶವನ್ನೇಕೆ ಕೊಡಬಾರದು? ಸರಕಾರದಿಂದಲೇ ಇಂತಹ ಕಷ್ಟಗಳಾಗುತ್ತಿವೆ. ಸುಮಾರು 12 ಗಂಟೆಯಿಂದ ಪೋಲೀಸಿನವರು ಅವರ ದರ್ಪ ತೋರಿಸುತ್ತಿದ್ದಾರೆ.

ಅಧ್ಯಕ್ಷರು.—ಹೇಳಿದ್ದನ್ನೇ ಪದೇ ಪದೇ ಹೇಳುವುದರಿಂದ ಏನೂ ಪ್ರಯೋಜನವಿಲ್ಲ. ಮಾನ್ಯ ಸದಸ್ಯರು ಕೊಟ್ಟಿರುವ ನೋಟೀಸ್ ಈಗ ತಾನೇ ನನಗೆ ಬಂದಿದೆ. ಅದನ್ನು ನಾನು ನೋಡಿ ಅವರ ಬಗ್ಗೆ ಏನು ಮಾಡಬೇಕೆಂಬುದನ್ನು ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ತಾವು ಅವರ ಬಗ್ಗೆ ಹೇಳುವುದಕ್ಕೆ ಮೂರು ನಾಲ್ಕು ದಿವಸ ತಗೆದುಕೊಳ್ಳಬೇಕೆಂಬುದು ನನ್ನ ಉದ್ದೇಶವಲ್ಲ. ಶಾಂತ ವಾತಾವರಣ ಇರಬೇಕು. ಯಮನ ರಾಜ್ಯದ ವಾತಾವರಣದಲ್ಲಿರುವುದಕ್ಕೆ ಸಾಧ್ಯವಿಲ್ಲ. ನಾವು ಪ್ರಜಾಸತ್ತೆಯಲ್ಲಿದ್ದೇವೆ. ಪಾಕಿಸ್ತಾನದಲ್ಲಿ ಈ ರೀತಿಯಾದರೆ ಒಪ್ಪಿಕೊಳ್ಳಬಹುದು ಅಲ್ಲಿ ಅಯೂಬ್ ಖಾನ್ ಅವರ ಆಡಳಿತವಿದ್ದಾಗ ಅಲ್ಲಿ ಏನು ಬೇಕಾದರೂ ಮಾಡಬಹುದು. ಅದೂ ಕೂಡ ಈಗೊತ್ತು ಹೋಯಿತು. ಈ ದಿನ ನಡೆದಿರುವುದು ಶೋಚನೀಯ ವಿಷಯ, ನಾಚಿಕೆಗೇಡಿನ ವಿಷಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಮಾನ್ಯ ಸದಸ್ಯರಾದ ನಂಜೇಗೌಡರು ಎರಡು ಮೂರು ಬಾರಿ ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತಂದರು. ಒಂದನೆಯದು ಸಭೆಗೆ ಪ್ರವೇಶವನ್ನು ರೆಗ್ಯುಲೇಟ್ ಮಾಡಿದ್ದೀರಿ ಎನ್ನುವುದು. ಅದಕ್ಕೆ ತಾವು ಆಗಲೇ ಹೇಳಿದ್ದೀರಿ, ಅದನ್ನು ನಾನು ರೆಗ್ಯುಲೇಟ್ ಮಾಡಿದ್ದೇನೆ, ಯಾರಾದರೂ ಪ್ರೇಕ್ಷಕರು ಇದ್ದರೆ ಅವರನ್ನು ಮಾನ್ಯ ಸದಸ್ಯರು ಪಾಸ್ ಕೊಡಿಸಿ ಒಳಗೆ ಬರುವಂತೆ ಮಾಡುವುದಕ್ಕೆ ಅಕ್ಷೇಪಣೆ ಇಲ್ಲ ಎಂದು ವಿಶದಪಡಿಸಿದ್ದೀರಿ.

ಈಗ ಮಾನ್ಯ ನಂಜೇಗೌಡರು 312 ನೇ ನಿಯಮದ ಪ್ರಕಾರ ಒಂದು ವಿಚಾರವನ್ನು ಎತ್ತುತ್ತೇನೆಂದು ಹೇಳಿದರು. ತಾವು ಅಪ್ಪಣೆ ಕೊಟ್ಟರೋ ಇಲ್ಲವೋ ನನಗೆ ಗೊತ್ತಿಲ್ಲ. ಅಪ್ಪಣೆ ಕೊಟ್ಟಿಲ್ಲ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಈ ಮಧ್ಯೆ ಅವರು ಹಲವಾರು ವಿಚಾರಗಳನ್ನು ಹೇಳಿದರು. ಈ ವಿಧಾನ ಸೌಧದ ದ್ವಾರದಲ್ಲಿ ಯಮನ ರಾಜ್ಯವಾಗಿದೆ ಎಂದೂ, ಅಯೂಬ್ ಖಾನರ ಆಡಳಿತವಾಗುತ್ತಿದೆಯೋ ಏನೋ ಎನ್ನುವ ಸಂಶಯ ಬರುತ್ತದೆ ಎಂದೂ ಹೇಳಿದರು. ಹೀಗೆ ತಾವು ಅಪ್ಪಣೆ ಕೊಡುವುದಕ್ಕೆ ಮುಂಚೆ ಅವರು 312 ನೇ ನಿಯಮದ ಪ್ರಕಾರ ಅವಕಾಶ ಕೊಡಲಿ, ಬಿಡಲಿ, ಅವಕಾಶ ಕೊಡುವುದಕ್ಕೆ ಮುಂಚೆಯೇ ಅನೇಕ ವಿಚಾರಗಳನ್ನು, ಸರ್ಕಾರದ ಮೇಲೆ ಅಪವಾದ ಬರತಕ್ಕ ವಿಚಾರಗಳನ್ನು ಹೇಳಿದರೆ ಅದಕ್ಕೆ ಉತ್ತರ ಕೊಡುವುದಕ್ಕೆ ನಮಗೆ ಅವಕಾಶವಿಲ್ಲದೆ ಹೋಗುತ್ತದೆ. ತಾವು 312 ನೇ ನಿಯಮದ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಸದಸ್ಯರಿಗೆ ಅವಕಾಶ ಕೊಡುತ್ತೀರಿ ಎಂದು ಇತ್ಯರ್ಥವಾದ ಮೇಲೆ ಅವರು ತಮ್ಮ ಅನುಮತಿಯನ್ನು ಪಡೆದು ಯಾವ ವಿಚಾರ ಹೇಳಬೇಕೆಂದು ಅಪೇಕ್ಷೆಪಡುತ್ತಾರೋ ಅದನ್ನು ಹೇಳುವುದಕ್ಕೆ ಅವರು ಸ್ವತಂತ್ರರಾಗಿರುತ್ತಾರೆ. ಅವರು ಹೇಳಿದ ವಿಚಾರಗಳಿಗೆ ಉತ್ತರ ಕೊಡುವುದಕ್ಕೆ ನಮಗೂ ಅವಕಾಶ ಕೊಡಿ. ಹಾಗಾದರೆ ಈ ಸಭೆಯಲ್ಲಿ ಅಥವಾ ಸಭಾ ಭವನದ ಹೊರಗಡೆ ಏನು ನಡೆಯುತ್ತದೆ ಎನ್ನುವುದು ಸಾರ್ವಜನಿಕರ ಗಮನಕ್ಕೆ ಬರುವುದಕ್ಕೆ ಅವಕಾಶವಾಗುತ್ತದೆ. ಅದಿಲ್ಲದೆ ಒಬ್ಬ ಸಭಾ ಸದಸ್ಯರು ಅಧ್ಯಕ್ಷರ ಅನುಮತಿಯನ್ನು ಕೋರಿ ಆ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಸಭೆಯಲ್ಲಿ ಹೇಳಿದರೆ ಆ ವಿಚಾರಗಳಿಗೆ ಉತ್ತರ ಕೊಡುವುದಕ್ಕೆ ನಮಗೆ ಅವಕಾಶವಿಲ್ಲದೆ ಜನರಲ್ಲಿ ತಪ್ಪು ಕಲ್ಪನೆ ಬರುವುದಕ್ಕೆ ಅವಕಾಶವಾಗುತ್ತದೆ. ಆ ಕಾರಣದಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಮಾನ್ಯ ಸದಸ್ಯರಾದ ನಂಜೇಗೌಡರಿಗೆ 312 ನೇ ನಿಯಮದ ಪ್ರಕಾರ ಅನುಮತಿಯನ್ನು ಕೊಡುತ್ತೀರಾ? ಕೊಟ್ಟಾದ ಮೇಲೆ ಅವರು ಎಷ್ಟು ವಿಚಾರ ಹೇಳಿದರೂ ಅದಕ್ಕೆ ನಾವು ಉತ್ತರ ಕೊಡುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಈಗ ಇಲ್ಲಿ ನಡೆಯುತ್ತಿರುವ ಚರ್ಚೆಯನ್ನು ನಾನು ಕುತೂಹಲದಿಂದ ಕೇಳಿದೆ. ಪ್ರತಿ ದಿವಸವೂ ಯಾರಾದರೂ ಅಸೆಂಬ್ಲಿ ಕಾರ್ಯಕಲಾಪಗಳನ್ನು ವೀಕ್ಷಿಸಲು ಬಂದರೆ ನಾವು ಅವರಿಗೆ ಪಾಸುಗಳನ್ನು ಕೊಡಿಸುತ್ತಿದ್ದೆವು. ಕೇಳಿದರೆ ಕೊಡುತ್ತಿದ್ದರು ಇದು ಮಾಮೂಲಾಗಿತ್ತು. ಈ ದಿವಸ ಕೂಡ ಹಾಗೆ ಚಳ್ಳಕೆರೆ ತಾಲ್ಲೂಕಿನಿಂದ ನನ್ನ ಸ್ನೇಹಿತರು ಕೆಲವರು ಬಂದಿದ್ದರು, ಅವರಿಗೆ ಪಾಸು ಕೊಡುವಂತೆ ನಾನು ಹೇಳಿದೆ. ಅದಕ್ಕೆ ಅಧ್ಯಕ್ಷರು ಹೇಳಿದ್ದಾರೆ, ಕೊಡುವುದಕ್ಕಾಗುವುದಿಲ್ಲ ಎಂದು ನೋಟೀಸ್ ಆಫೀಸಿನಲ್ಲಿ ಸ್ಪಷ್ಟವಾಗಿ ಹೇಳಿದರು. ಏಕೆ ಹೀಗೆ ಮಾಡುತ್ತಾರೋ ಅರ್ಥವಾಗುವುದಿಲ್ಲ. ಬಹಳ ಅನೌರಿಯಲ್ ಅಟ್‌ಮಾಸ್ಫಿಯರ್ ಏಕೆ? ಯಾರಾದರೂ ನೋಡಲು ಬಂದರೆ ಹೀಗೆ ಮಾಡುವುದುಸರಿಯೇ?

ಇನ್ನೊಂದು ಯಾರಿಗೂ ಪಾಸು ಕೊಡುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರು. ಒಂದು ವೇಳೆ ಬೇಕಾದರೆ ನಾವು ರುಜು ಮಾಡಿ ಕೊಡುತ್ತೇವೆ; ಡಿಕ್ಲರೇಷನ್ ಕೊಡುತ್ತೇವೆ. ಪ್ರಿಂಟ್ ಆಗಿರುವ ಫಾರಂಲ್ಲೇ ಹೀಗೆ ಮಾಡಬೇಕೆಂದಿದೆ. ಇದುವರೆಗೆ ಪಾಸು ಕೊಡಿ ಎಂದರೆ ತೊಂದರೆಯಿಲ್ಲದೆ ಕೊಡುತ್ತಿದ್ದರು. ಅನೇಕ ಸಾರಿ ಕೊಟ್ಟ ಪಾಸುಗಳನ್ನು ನಾವು ಉಪಯೋಗಿಸಿಯೇ ಇಲ್ಲ. ಈಗ ಆಗಿರುವುದು ಕಾಕತಾಳ ನ್ಯಾಯ—ಇರಬಹುದು. ರೆವಿನ್ಯೂ ಡಿಮ್ಯಾಂಡ್ ಇಂದು ಇರುವುದರಿಂದ ಈ ರೀತಿ ಮಾಡಿರಬಹುದು, ಹೊರಗಡೆ ಪೋಲೀಸು ಬಂದೋಬಸ್ತಿದೆ. ಪಾಸು ಕೊಡುವ ಬಗ್ಗೆ ನೀವು ಎರಡು+ಎರಡು ನಾಲ್ಕು ಎಂದು ಅರ್ಥ ಬರುವ ರೀತಿಯಲ್ಲಿ ಮಾಡಬಾರದು. ತಾವು ಪ್ರಜಾ ಪ್ರಭುತ್ವದ ಬೆಳವಣಿಗೆಗೆ ಮಾರ್ಗದರ್ಶಕರಾಗಿರುವುದರಿಂದ ಈ ರೀತಿ ಆಗುವುದಕ್ಕೆ ಅವಕಾಶ ಕೊಡ ಬಾರದು ಎಂದು ಪ್ರಾರ್ಥನೆ ಮಾಡುತ್ತೇನೆ. ಇದು ಅನಾವಶ್ಯಕವಾದ ಘಟನೆ ಎಂದು ನನಗೆ ಭಾಸವಾಗುತ್ತದೆ.

† ಶ್ರೀ ಪಾಟಾಳ್ ನಾಗರಾಜ್ (ಚಿಕ್ಕಪೇಟೆ).—ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ವಿಷಯವನ್ನು ಹೇಳುತ್ತೇನೆ. ಇಬ್ಬರನ್ನು ಬಿಟ್ಟಿರುವುದಾಗಿ ನೀವು ಹೇಳುತ್ತೀರಿ. ಆದರೆ ಒಂದು ಪಾಸೂ ಕೂಡ ಕೊಡಬಾರದು ಎಂದು ಅಧ್ಯಕ್ಷರ ಆರ್ಡರಾಗಿದೆ, ಕೊಡುವುದಿಲ್ಲ ಎಂದು ಹೇಳಿದರು. ಹೊರಗೆ ಎ. ಜಿ. ಆಫೀಸಿನ ಬಳಿ ಒಬ್ಬ ಪೋಲೀಸು ಇನ್‌ಸ್ಪೆಕ್ಟರು, ಇಬ್ಬರು ಸಬ್—ಇನ್‌ಸ್ಪೆಕ್ಟರು ಮತ್ತು ಪೋಲೀಸಿನವರು ಇದ್ದಾರೆ. ಇಂದು ಯಾವುದಾದರೂ ಮೆರವಣಿಗೆ ವಗೈರೆ ಏನೂ ಇಲ್ಲ. ಇಲ್ಲಿ ಕೇಳಿದಾಗ ಇಂದು ರೆವಿನ್ಯೂ ಡಿಮ್ಯಾಂಡ್ ಚರ್ಚೆ ಇದೆ, ಅದಕ್ಕೆ ರೈತರು ಬಂದು ಏನಾದರೂ ಮಾಡಬಹುದು ಎಂದು ಹೀಗೆ ಮಾಡಿದ್ದಾರೆಂದು ಕೆಲವರು ಹೇಳಿದರು.

ಅಧ್ಯಕ್ಷರು.—ಈಗ ಅದರ ಮೇಲೆ ಭಾಷಣ ಮಾಡುವುದಕ್ಕೆ ಅವಕಾಶವಿಲ್ಲ. I quite appreciate what the hon. Member Sri Siddaveerappa stated. Probably he has not properly understood me. I assure the hon. Member that it is never in my spirit to do a thing which is against my conscience. There was no question of allowing persons for the Speaker's Gallery. Admission to Visitors' Gallery is only regulated in view of the compla nts made by the staff of the watch and ward. I do not know whether my instructions were properly communicated and whether any misunderstanding has arisen. I shall check up and see that the public are not unnecessarily inconvenienced. I have got as much respect for Parliamentary conventions as the hon. Members, and as Speaker I am wedded to that doctrine. If the Member's signature is taken in token of identification of the visitor, that is enough and that is what I instructed and that is all that was expected to be done. I think, at this stage, the whole thing should stop. Let us use our time in a better way.

Sri H. M. CHANNABASAPPA (Periyapatna).—I think the purpose is served. The Gallery is not vacant.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಈ ದಿವಸ ಕಂದಾಯದ ಬೇಡಿಕೆ ಮುಂಡನೆಯಾಗುತ್ತದೆ. ಅನೇಕರು ಕಂದಾಯದ ವಿಚಾರ ಮಾತನಾಡುವುದನ್ನು ಕೇಳಲು ಬಂದಿದ್ದಾರೆ. ನನ್ನ ಹತ್ತಿರ 20–30 ಜನರು ಬಂದು ಚರ್ಚೆ ಕೇಳಬೇಕೆಂದು ಬಂದಿರುವುದಾಗಿ ಹೇಳಿದರು. ನಾನು ಹೋಗಿ, ಬಿಡುತ್ತಾರೆ ಎಂದು ಅವರಿಗೆ ಹೇಳಿದೆ. ನಾನು 5 ನಿಮಿಷ ಲೇಟಾಗಿ ಬಂದೆ. ವಿಧಾನ

ಸೌಧದ ಮುಂದೆ ಅವರು ನಿಂತಿದ್ದರು. ಏಕೆ ಎಂದು ಅವರನ್ನು ಕೇಳಿದಾಗ ಅವರು ಇಂದು ಪಾಸು ಕೊಡುವುದಿಲ್ಲವಂತೆ ಎಂದು ಹೇಳಿದರು. ನಾನು ಬಂದ ತಕ್ಷಣ ಏನು ಅನಾಹುತವಾಗಿದೆ ಎಂದು ಕೇಳಿದೆ. ಪೋಲೀಸಿನವರು ಏಕೆ ಇಷ್ಟೊಂದು ಜನರು ಇರುವುದು ? ಪೋಲೀಸಿನವರಿಗೆ ಬೇರೆ ಕೆಲಸವಿಲ್ಲವೇ ? ನೀವು ಮಾಡಿರ ವುದು ಬಹಳ ತಪ್ಪು. ಯಾರೇ ಆಗಲಿ ಹೀಗೆ ಮಾಡಬಾರದಾಗಿತ್ತು.

Mr. SPEAKER.—Unecessary assumptions should not be made. I have made the point clear beyond any shadow of doubt. Nothing has happened. I think that should satisfy everybody.

Sri S. SIVAPPA.—What is the use when my people have gone away ?

Mr. SPEAKER.—They are everybody's people.

2-30 P. M.

ಶ್ರೀ ಎಸ್. ಶಿವಪ್ಪ.—ಇವತ್ತಿನ ದಿವಸವೇ ಕೆಟ್ಟ ದಿವಸ ಸ್ವಾಮಿ, ಪಾಕೀಸ್ತಾನದಲ್ಲಿ ಮಾರ್ಷಲ್ ಲಾ ಜಾರಿಗೆ ಬಂದಿದೆ, ಇವತ್ತು ಕೆಟ್ಟದಿವಸವಾದ್ದರಿಂದ ನಾವು ಬಹಳ ಹುಷಾರಾಗಿರ ಬೇಕು.

Mr. SPEAKER —For the information of the hon. Members and in order to avoid such things in future, I shall read the rules pertaining to Visitors' gallery :

"The admission of strangers during the sittings of the Assembly to those portions of the Assembly which are not reserved for the exclusive use of members shall be regulated in accordance with orders made by the Speaker.

"The Speaker may, whenever he thinks fit order the withdrawal of strangers from any part of the Assembly."

ಶ್ರೀ ವಾಟಾಳ್ ನಾಗರಾಜ್.—ಎಲ್ಲರಿಗೂ ಗೊತ್ತಿದೆ ಸ್ವಾಮಿ ಅದು, ಪೋಲೀಸ್‌ನವರು ಜನರನ್ನು ಒಂದು ಮೈಲಿ ಆಚೆ ಇಲ್ಲಿಗೆ ಬರದಂತೆ ತಳ್ಳಿದ್ದಾರೆ. ಇದು ಯಾರು ಮಾಡಿರುವುದು ಸ್ವಾಮಿ ?

Mr. SPEAKER.—The members cannot hold me responsible for what has happened outside the precincts of the House.

Sri H. M. CHANNABASAPPA.—But, the Chair is responsible for what has happened inside the House !

Mr. SPEAKER.—If the passes are issued on the basis of the signatures of members, nobody will be denied admission, subject to the availability of space.

Sri H. M. CHANNABASAPPA.—Sir, you were good enough to say that particularly today the Watch and Ward made a complaint, and therefore the public are to be prohibited. Is the decision of the Watch and Ward a guidance to you ?

Mr. SPEAKER.—The hon. member should have understood me clearly.

Sri H. M. CHANNABASAPPA.—I have understood.

Mr. SPEAKER.—I have taken into consideration the incidents that were brought to my notice, and in the light of that I have restricted admissions. If the hon. members put their signatures on the passes, they will be respected.

Sri H. SIDDAVEERAPPA.—Sir, I request that this should be the last occasion for such complaints.

Mr. SPEAKER.—I will not give scope to any complaints.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ಪೀಮಿ ಇವತ್ತು ಇಲ್ಲಿಯ ವಾಚ್ ಅಂಡ್ ವಾರ್ಡ್‌ರವರು ಏನಿದ್ದಾರೆ.....

ಅಧ್ಯಕ್ಷರು.—ತಾವು ಏನೂ ಹೇಳಬೇಕಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಒಂದು ವಿಷಯ ತಿಳಿಸಲೇಬೇಕಾಗಿದೆ ಏನೆಂದರೆ.....

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಶ್ರೀ ಸಿದ್ದವೀರಪ್ಪನವರು ಮಾತನಾಡುವುದಕ್ಕೆ ಎದ್ದಿದ್ದಾರೆ.

† ಶ್ರೀ ಎಸ್. ಬಂಗಾರಪ್ಪ.—ತಾವು ಹೇಳುವುದು, ತಮ್ಮ ಚೋನು ನಮಗೆ ಹಿಡಿನುತ್ತಾ ಇಲ್ಲ. ತಾವು ನಾನು ಏನು ಹೇಳಬೇಕೆಂದು ಇದ್ದೇನೆ ಅದಕ್ಕೆ ಅವಕಾಶ ಕೊಡುತ್ತಾ ಇಲ್ಲ, ಏನು ಹೇಳುವುದಕ್ಕೆ ಪ್ರಾರಂಭಮಾಡಿದರೂ ಸಿಟ್‌ಡೌನ್ ಅಂತ ಆರ್ಡರ್ ಮಾಡುತ್ತೀರಿ, ಸಿಟ್‌ಡೌನ್, ಸಿಟ್‌ಡೌನ್ ಅಂತ ತಾವು ಹೇಳುವುದನ್ನು ನಾನು ಇನ್ನು ಸಹಿಸುವುದಕ್ಕೆ ಆಗುವುದಿಲ್ಲ, ಸ್ಪೀಮಿ ಅಧ್ಯಕ್ಷರೇ ಅಂತ ನಾನು ಹೇಳಿದರೆ ತಾವು ಸಿಟ್‌ಡೌನ್ ಅಂತ ಆರ್ಡರ್ ಮಾಡುತ್ತೀರಿ, ತಾವು ಏನೇ ಹೇಳಬೇಕಾದರೂ ಕೂಡ ಅದು ನೈಸ್ ಆಗಿರಬೇಕಾಗುತ್ತದೆ. ನಾವು ತಮಗೆ ಸ್ಪೀಮಿ ಅಧ್ಯಕ್ಷರೇ ಅಂತ ಮರ್ಯಾದೆ ಕೊಟ್ಟು ಹೇಳಿದರೆ ತಾವು ಸಿಟ್‌ಡೌನ್ ಅಂತ ಅನ್ನುವುದು ಖಂಡಿತ ನರಿಯಾದ್ದಲ್ಲ ನಮಗೂ ಮರ್ಯಾದೆ ಇದೆ. * * * *

Sri K. PUTTASWAMY.—Sir, I rise to a Point of Order.

ಸ್ಪೀಮಿ, ಈಗ ಈ ಸಭೆಯ ಗೌರವವನ್ನು ಕಾಪಾಡುವುದು ಹೇಗೆ ಎಂಬುದು ತಿಳಿಯದಾಗಿದೆ.....

ಶ್ರೀ ವಾಟಾಳ್ ನಾಗರಾಜ್.—ಸಭೆಯ ಗೌರವವನ್ನು ಕಾಪಾಡತಕ್ಕ ವಿಷಯ ಆ ಮಂತ್ರಿಗಳೊಬ್ಬರಿಗೇ ಅಲ್ಲ ಅದು ನಮಗೂ ಗೊತ್ತಿದೆ. ನಾವು ಅವರಿಂದ ಅದನ್ನು ಕಲಯಬೇಕಾದುವಿಲ್ಲ...

Mr SPEAKER.—The Hon. Minister is on a Point of Order. Let us hear him. I shall hear the members afterwards.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಾದ ಬಂಗಾರಪ್ಪನವರೂ ಮತ್ತು ಹಾಗೂ ವಾಟಾಳ್ ನಾಗರಾಜ್ ಅವರೂ ಈ ದಿವಸ ಅಧ್ಯಕ್ಷರು—ತಾವು ಎಷ್ಟು ಹೇಳಿದರೂ ಅವರು ತಮ್ಮ ಹೇಳಿಕೆಯನ್ನೂ ಮತ್ತು ತೀರ್ಮಾನಗಳನ್ನೂ.....

ಶ್ರೀ ಎಸ್. ಬಂಗಾರಪ್ಪ.—ಸ್ಪೀಮಿ, ಅವರು ಹೇಳಿದ ಮೇಲೆ ನನಗೂ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಡಬೇಕು.....

ಅಧ್ಯಕ್ಷರು.—ತಾವು ಮೊದಲು ಕುಳಿತುಕೊಳ್ಳಬೇಕು—ಪಾಯಿಂಟ್ ಆಫ್ ಆರ್ಡರ್ ಏನು ಎಂಬುದನ್ನು ಕೇಳಿ.....

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ನಾನು ಎಷ್ಟು ಸಾರ್ತಿ ತಮಗೆ ಸ್ಪೀಮಿ, ಸ್ಪೀಮಿ ನನ ಒಂದು ಪ್ರಾರ್ಥನೆ ಇದೆ ಎಂದು.....

ಅಧ್ಯಕ್ಷರು.—ತಾವು ಮೊದಲು ಕುಳಿತುಕೊಳ್ಳಬೇಕು. ಪಾಯಿಂಟ್ ಆಫ್ ಆರ್ಡರನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ತಾವು ಆ ಪಾಯಿಂಟ್ ಆಫ್ ಆರ್ಡರು ಮುಗಿದ ಮೇಲೆ ನನಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಾದರೆ ನಾನು ಕುಳಿತುಕೊಳ್ಳುತ್ತೇನೆ.

Mr. SPEAKER.—I shall give you an opportunity.

---

* * * Matter not recorded as ordered by the Chair.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಅಧ್ಯಕ್ಷರ ತೀರ್ಮಾನವನ್ನು ಪದೇ ಪದೇ ಪ್ರತಿಭಟಿಸುತ್ತಿದ್ದಾರೆ. ಅವರು ಪ್ರತಿಭಟಿಸುವುದನ್ನು ನೋಡಿದರೆ ಅದು ಸಭೆಗೆ ಎಳ್ಳಷ್ಟೂ ಗೌರವ ತರುವುದಿಲ್ಲ. ಅದರ ಬಗ್ಗೆ ಅಧ್ಯಕ್ಷರು ಮೊದಲು ತೀರ್ಮಾನ ಮಾಡಬೇಕು.

ಶ್ರೀ ಕೆ. ಎಚ್. ರಂಗನಾಥ್ (ಮೂಡಬಿದರೆ).—ಅವರು ಎತ್ತಿದ್ದು ಅದು ಒಂದು ಪಾಯಿಂಟಾಫ್ ಆರ್ಡರೇ ?

Mr. SPEAKER.—It is everybody's duty to act according to Rules.

Sri AZEEZ SAIT (Narasimharaja).—The Hon. Chair please request the Minister for Parliamentary Affairs to act properly.

Mr. SPEAKER.—I uphold the Point of Order raised by the Hon. Minister for Parliamentary Affairs.

†ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಅಧ್ಯಕ್ಷರೇ ಈ ದಿವಸ ಈ ಸಭೆಯಲ್ಲಿ ರೆವೆನ್ಯೂ ಡಿಮ್ಯಾಂಡಿನ ಪ್ರಶ್ನೆ ಚರ್ಚೆಗೆ ಬರುತ್ತದೆಂಬ ವಿಷಯ ಎರ್ಲಾ ದಿನಪತ್ರಿಕೆಗಳ ಮೂಲಕ ಜನರಿಗೆ ದೇಶದಾದ್ಯಂತವೂ ತಿಳಿದಿತ್ತು. ಆದರೆ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದಂತೆ ಇದು ಒಂದು ಕಾಕತಾಳನ್ಯಾಯ ವಿದ್ದರೂ ಇರಬಹುದು. ಆಗ ಬಂದು ಕುಳಿತುಕೊಳ್ಳುವುದಕ್ಕೂ ಆ ತಾಳೆಗರಿ ಮುರಿದುಬೀಳುವುದಕ್ಕೂ ಒಂದೇ ಆದಂತೆ ಇಲ್ಲಿಯೂ ಕಾಕತಾಳ ನ್ಯಾಯ ಆಗಿರಬಹುದು. ಹೊಸಗಡೆಯಲ್ಲಿ ಪೋಲೀಸಿನವರೇನು ತಪ್ಪು ಮಾಡಿದ್ದಾರೆಂಬುದು ಒಳಗೆ ಕುಳಿತಿರತಕ್ಕ ಅಧ್ಯಕ್ಷರಿಗೆ ತಿಳಿಯದೆ ಇರಬಹುದು. ಅನೇಕರು ಬಹಳ ಆಸೆಯಿಟ್ಟುಕೊಂಡು ಇಲ್ಲಿ ನಡೆಯುತಕ್ಕ ಈ ದಿನದ ಕಾರ್ಯಕಲಾಪಗಳನ್ನು ವೀಕ್ಷಿಸುವುದಕ್ಕೆ ಬಹಳ ದೂರದಿಂದ ಬಂದಿದ್ದಾರೆ. ಅವರಿಗೆ ಇಲ್ಲಿ ಕುಳಿತುಕೊಳ್ಳುವುದಕ್ಕೆ ಎಷ್ಟು ಅವಕಾಶ ಒದಗಿಸಬಹುದೋ ಅಷ್ಟನ್ನು ಒದಗಿಸಿದ್ದರೆ ಸಾಕಾಗಿತ್ತು. ಇದೇ ವಿಷಯದಲ್ಲಿ ನಾನು ಅಧ್ಯಕ್ಷರಾದ ತಮ್ಮಲ್ಲಿ ಒಂದು ವಿಷಯವನ್ನು ವಿಜ್ಞಾಪನೆ ಮಾಡಿಕೊಳ್ಳಬೇಕೆಂದು ಸಭಾ ಮರ್ಯಾದೆಗೂ ಮತ್ತು ಅಧ್ಯಕ್ಷರ ಮರ್ಯಾದೆಗೂ ಯಾವ ರೀತಿಯಲ್ಲೂ ಬಾಧಕವಾಗದಂತೆ ನಾನು ಸ್ವಾಮಿ ಸ್ವಾಮಿ ಎಂದು ಮರ್ಯಾದೆಯಿಂದ ಕೇಳುತ್ತಿದ್ದಾಗ, ಅದು ಈ ಸಭೆಯ ಗೌರವವನ್ನು ಯಾವ ರೀತಿಯಿಂದಲೂ ಕಡಮೆ ಮಾಡತಕ್ಕ ರೀತಿಯಲ್ಲಿ ಇರಲಿಲ್ಲ.

ಇನ್ನು ನಾನು ಹೇಳಬೇಕಾದರೆ ತಾವು ಹೇಳತಕ್ಕ ದಾಟಿಯಲ್ಲಿ ಸ್ವಲ್ಪ ಬದಲಾವಣೆಯಾಗುವುದು ಅವಶ್ಯಕ. ಪ್ಲೀಜ್ ಎನ್ನುವ ಮಾತು ಹೇಳದೇ ಇದ್ದರೂ ಪರವಾ ಇಲ್ಲ. ಸಿಟ್ ಡೌನ್ ಎಂದು ಹೇಳಿದರೆ, ನಾವು ಕೂತುಕೊಳ್ಳುತ್ತೇವೆ. ಸಪ್ಲಿಮೆಂಟರಿ ಪ್ರಶ್ನೆ ಹಾಕುವಾಗ ಎದ್ದು ನಿಂತು ಕೂತುಕೊಳ್ಳುವುದೆಂದರೆ ಮರ್ಯಾದೆ ಹೋಗುತ್ತದೆ. ನಾನು ಪ್ರಶ್ನೆ ಹಾಕಲು ತಾವು ಕರೆಯುವವರೆಗೂ ನಾನು ಏಳುವುದಿಲ್ಲ. ಈ ಸಭೆಯ ಗೌರವವನ್ನು ನಾನು ಕಾಪಾಡಬೇಕು. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ನನಗೆ ಈ ವಿಷಯವಾಗಿ ಪಾಠ ಹೇಳಿಕೊಡಬೇಕಾಗಿಲ್ಲ. ಬಂಗಾರಪ್ಪ ಮತ್ತು ಪಾಟಾಳ್ ನಾಗರಾಜ್ ಅವರು ಏನೋ ಒಂದು ಮಾತಾ ತಪ್ಪು ಮಾಡಿದ್ದಾರೆ, ಅವರನ್ನು ಕ್ರಿಮಿನಲ್ ಕೇಸಿನಲ್ಲಿ ಅಪರಾಧಿಯನ್ನು ಟ್ರೀಟ್ ಮಾಡುವ ಹಾಗೆ ಮಾಡಬೇಕು ಎನ್ನುವ ಭಾವನೆಯಿಂದ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ನಾನು ಅಧ್ಯಕ್ಷರಲ್ಲಿ ವಿನಂತಿಸಿಕೊಳ್ಳುತ್ತೇನೆ, ಈ ಸಭೆಯ ಗೌರವ, ಘನತೆಗಳನ್ನು ಅಧ್ಯಕ್ಷರು ಕಾನೂನು ಪ್ರಕಾರ ಕಾಪಾಡಬೇಕು, ಅದಕ್ಕೆ ಧಕ್ಕೆ ತರುವ ಅವಶ್ಯಕತೆ ಇಲ್ಲ. ಆದ್ದರಿಂದ ತಮ್ಮ ಟೋನ್ ಬದಲಾವಣೆಯಾಗಬೇಕು. ನಾನು ಹೇಳುತ್ತಿರುವುದು ತಮಗೆ ಇರಿಟೇಟ್ ಆಗಬಹುದು. ಆದರೂ ತಮ್ಮ ಟೋನನ್ನು ನಾವು ತಡೆದುಕೊಳ್ಳುವುದಕ್ಕಾಗುವುದಿಲ್ಲ. ಪ್ಲೀಜ್ ಎಂಬ ಪದ ನನಗೆ ಬೇಡ. ಸಿಟ್ ಡೌನ್ ಎಂದು ಹೇಳಿದರೆ ಸಾಕು. ಆದ್ದರಿಂದ ತಾವು ಮತ್ತೆ ಆ ಪದವನ್ನು ರಿಪೀಟ್ ಮಾಡಬೇಡಿ.

ಶ್ರೀ ಎಚ್. ಸಿದ್ದವೀರಪ್ಪ.—ನಿನ್ನೆಯ ದಿವಸ ನಾನು ಒಂದು ಪತ್ರವನ್ನು ಬರೆದಿದ್ದೆ. ತಮ್ಮ ಅಪ್ಪಣೆ ದೊರೆತರೆ, ಆ ವಿಚಾರ ನಾನು ಈ ದಿವಸವೇ ಪ್ರಸ್ತಾಪ ಮಾಡುತ್ತೇನೆ. ಆದ್ದರಿಂದ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

Mr. SPEAKER.—I have passed on a copy of your points to the Hon. Minister. Probably he is not keeping good health. If he comes tomorrow, I will take it up tomorrow. Personal explanation should be in the presence of the other party so that there could be a complete understanding of each other. I shall ascertain when he comes. Probably, if he comes tomorrow, I shall allow you tomorrow.

ಶ್ರೀ ಎಚ್. ಸಿದ್ದವೀರಪ್ಪ.—ಸಂಬಂಧಪಟ್ಟ ಇಬ್ಬರು ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳೂ ಇದ್ದಾಗಲೇ ಮಾತನಾಡಬೇಕೆಂದು ನನ್ನ ಆಶೆ.

Sri K. PUTTASWAMY.—I shall see that some time is arranged for both the member and the Minister to be present.

(*Sri M. Nagappa stood up*)

Mr. SPEAKER.—Let us do some business. I request the hon. Member to come to my Chamber.

Sri M. NAGAPPA (Raichur).—I am very sorry. I have come and requested you in your chambers not once but more than ten times and every time you have been saying that it will be taken up tomorrow, it will be taken up tomorrow. This 'tomorrow' will have to be interpreted. As a matter of courtesy, I have been to your chamber not once but several times. ಮಾನ್ಯ ಶ್ರೀ ನಾಡಗೌಡರ ಬಗ್ಗೆ ನೋಟೀಸ್ ಕೊಟ್ಟು 15 ದಿವಸಗಳು ಆಯಿತು. ನಾನು ನಿಮ್ಮನ್ನು ಪ್ರತಿಯೊಂದು ದಿವಸವೂ ಕಾಣುತ್ತಿದ್ದೇನೆ. ಇದರ ಬಗ್ಗೆ ತಾವು ಯಾವ ಪದ್ಧತಿಯನ್ನು ಅನುಸರಿಸುತ್ತಿದ್ದೀರಿ ಎಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಕೋಆಪರೇಷನ್ ಇಲಾಖೆಯ ಡಿವ್ಯಾಂಡ್ ಬಂದಾಗ ಮಾನ್ಯ ಸದಸ್ಯರು ಏನು ಪ್ರಶ್ನೆ ಎಬ್ಬಿಸಿದ್ದೀರಿ, ಅದಕ್ಕೆ ಮಂತ್ರಿಗಳು ಉತ್ತರ ಕೊಟ್ಟಿಲ್ಲವೇ? ನನ್ನ ಚೇಂಬರಿಗೆ ಬಂದರೆ, ತಾವು ಹೇಳುವುದನ್ನು ಪರಿಶೀಲಿಸಬಹುದು.

ಶ್ರೀ ಎಂ. ನಾಗಪ್ಪ.—ನಾನು ನೋಟೀಸು ಕೊಟ್ಟದ್ದು ಯಾವಾಗ? ತಾವು ರೂಮಿಗೆ ಬನ್ನಿ ಎಂದಾಗ, ಒಂದು ಸಾರಿಯಲ್ಲ 10 ಸಾರಿ ಬಂದಿದ್ದೇನೆ. ಎಷ್ಟು ದಿವಸವಾಯಿತು, ಸ್ವಾಮಿ?

Mr. SPEAKER.—I shall attend to it within a day or two.

Calling Attention to Matters of Urgent Publice Importance

(i) *re* : Fire accident in some villages of Chamarajanagar Taluk.

Sri S. PUTTASWAY (Chamarajanagar).—I call the attention of the Minister for Revenue to the fire accident in Udigala, Haradanahalli and Aluru villages in Chamarajanagar taluk on 10th March 1969.

†Sri H. V. KOUJALGI (Minister for Revenue).—Sir, Fire accidents occurred at the following places in Chamarajanagar Taluk of Mysore district on the dates noted against each.—

Sl. No.	*Name of village*	*Date of occurrence*	*Time.*
1.	Haradanahalli	7-3-1969	1 P.M.
2.	Alur	8-3-1969	4 P.M.
3.	Udigala	10-3-1969	8 P.M.
4.	Chamarajanagar Town	12-3-1969	2-30 P.M.

On getting intimation, the local officers, namely, the Tahsildar, the B.D.O., the Revenue Inspector and other subordinate officials concerned rushed to the spots where the fire had broken out, inspected the places and rendered immediate and timely relief to the victims.